# ಕಾನನ

ನಿಸರ್ಗದೆಡೆಗೆ ಪಯಣ

ಮೇ 2014



BANNERUGHATTA

WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ

**ಸಂಪಾದಕೀಯ**

ಅಶ್ವಥ ಕೆ.ಎನ್

**ಲೇಖನ ವೃಂದ**

ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

ಮಹದೇವ ಕೆ.ಸಿ

ಅಶ್ವಥ ಕೆ.ಎನ್

ಶಂಕರಪ್ಪ ಕೆ.ಪಿ

ಸುಬ್ಬು ಬಾದಲ್

ಶ್ರೀಕಾಂತ್ ಭಟ್

**ಕರಡು ತಿದ್ದುಪಡಿ**

ಮುರಳಿ ಎಸ್

**ವಿನ್ಯಾಸ**

ಮಹದೇವ ಕೆ.ಸಿ

**ಛಾಯಾಚಿತ್ರ**

ಕಾರ್ತಿಕ್ ಎ.ಕೆ

**ಮುಖಪುಟ ಛಾಯಾಚಿತ್ರ**

ಶ್ರೀನಿವಾಸ್ ಕೆ.ಎಸ್

**ಇ-ವಿಳಾಸ**

kaanana.mag@gmail.com

www.issuu.com/kaanana

**ಮುಖಪುಟ**

ಆನೆ

BANNERUGHATTA WILDLIFE CONSERVATION GROUP



ಸಂಪಾದಕೀಯ



ಗಿಳಿಯು ರಾಮ ಎಂದಂತೆ



ಚಿಟ್ಟೆ ಗುರುತು




ಆನೆ ಸವಾರಿ



ವಿ ವಿ ಅಂಕಣ



ಕವನ



ಪ್ರಕೃತಿ ಬಿಂಬ

# ಸಂಪಾದಕೀಯ

ಔದ್ಯೋಗಿಕರಣ, ನಗರೀಕರಣದ ಜಂಜಾಟದಲ್ಲಿ ಹಾಗೂ ಕಾಂಕ್ರೀಟ್ ಕಾಡಿನಲ್ಲಿ ಕಳೆದುಹೋಗಿರುವ ನಮಗೆ ನಗರಕ್ಕೆ ಕೇವಲ 30 ಕಿಮಿ ದೂರದಲ್ಲಿರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾವನವಿರುವುದು ಎಷ್ಟೋ ಜನರಿಗೆ ಇನ್ನೂತಿಳಿದೇ ಇಲ್ಲ ಏಷ್ಯಾದಲ್ಲೇ ನಗರಕ್ಕೆ ಹತ್ತಿರದ ರಾಷ್ಟ್ರೀಯ ಉದ್ಯಾನವನ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ ನಮ್ಮ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ.ವಿಶ್ವ ಜೀವವೈವಿಧ್ಯತೆಯ ದಿನದಂದು, ಈ ಕುರುಚಲು ಕಾಡಿನ ಬಗ್ಗೆ ನಿಮಗೆ ತಿಳಿಸಲೇಬೇಕು.


ಕುರುಚಲಕಾಡು ಎಂದೇ ಕರೆಯಲ್ಪಡುವ ಈ ಕಾಡು ವನ್ಯಜೀವಿಗಳ ವೈವಿಧ್ಯತೆಯ ಆಗರ. ಆನೆ, ಜಿಂಕೆ, ಕಾಟಿ, ಚಿರತೆ ಕರಡಿ, ಹಂದಿ, ಮೊಲ ಮೊದಲಾದ ವನ್ಯ ಮಿಖಗಳಿಗೆ ಇದೇ ಸ್ವರ್ಗ ಸುಮಾರು 104 ಚದುರ ಕಿ.ಮೀ ವಿಸ್ತೀರ್ಣ ಹೊಂದಿರುವ ಈ ಕಾಡು ವನ್ಯಮೃಗಗಳಲ್ಲದೇ ಸುಮಾರು 160 ಜಾತಿಯ ಪಕ್ಷಿಗಳನ್ನೂ ಕಾಣಸಿಗುತ್ತವೆ. ಹಾಗೂ 60ಕ್ಕೂ ಹೆಚ್ಚು ಜಾತಿಯ ಚಿಟ್ಟೆಗಳೂ ಇಲ್ಲಿವೆ. ಇಂತಹ ವನ್ಯಮೃಗಗಳ ಆಗರವಾಗಿರುವ ಹಾಗೂ ನಗರಕ್ಕೆ ಸಮೀಪವೇ ಇರುವ ಈ ಕಾಡು ಬೇಟೆಗಾರರ, ಗಣಿಕಾರರ, ಮರಳುಚೋರರ ಆದಾಯದ ಮಾರ್ಗಗಳಾಗಿ ಪರಿವರ್ತನೆಗೊಂಡಿವೆ.

ಕಾಡಿನ ಅಂಚಿನಲ್ಲೇ ಅನೌಪಚಾರಿಕ ಬೆಳವಣಿಗೆಗಳು ನಡೆಯುತ್ತಿವೆ. ಇವೆಲ್ಲವುದರ ಪರಿಣಾಮವೇನೋ ಸೀಳುನಾಯಿಯಂತಾ ಸೂಕ್ಷ್ಮಪ್ರಾಣಿಗಳು ಈ ಕಾಡಿನಲ್ಲಿ ಕಣ್ಮರೆಯಾಗುತ್ತಿರುವುದು ಶೋಚನೀಯವೇ ಸರಿ, ಕಡವೆ ಜಿಂಕೆಗಳು ಬೇಟೆಗಾರನ ಕೋವಿಗೆ ತಲೆಬಾಗುತ್ತಿವೆ. ನೆತ್ತಿ ಬ್ಯಾಟರಿಗೆ ಕಣ್ ಕೊಟ್ಟ ಮೊಲ ಅವನ ಹೊಟ್ಟೆ ಸೇರುತ್ತಿವೆ. ಹೀಗಾಗಿ ಜೀವ ವೈವಿಧ್ಯತೆಯ ಆಗರವಾಗಿರುವ ಈ ಕಾಡುಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಹಾಗೂ ಅನಿವಾರ್ಯ ಕೂಡ. ಹಾಗಾಗಿ ಈಗಲಾದರೂ ಪರಿಸರ ಪ್ರಜ್ಞೆ ಇರುವ ಪ್ರಜ್ಞಾವಂತರು ಇದರ ಬಗ್ಗೆ ಸ್ವಲ್ಪ ಗಮನಹರಿಸಿದರೆ ಮುಂದಿನ ಪೀಳಿಗೆಗೆ ಇಂತಹ ಒಂದು ಅಭೂತಪೂರ್ವ ಸ್ವರ್ಗವನ್ನು ಉಡುಗೊರೆಯಾಗಿ ಕೊಡಬಹುದೇನೋ?

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.

ಇ-ಅಂಚೆ : kaanana.mag@gmail.com

Wildlife Conservation Group



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು

### ★ ಗಿಳಿಯು ರಾಮ ಎಂದಂತೆ

ಮನುಷ್ಯ ಹೊರಗಡೆ ನೋಡಲು ಸಭ್ಯನಂತೆ ಕಾಣಬಹುದು ಒಳ್ಳೆಯ ಮಾತುಗಳನ್ನೂ ಸಹ ಆಡಬಹುದು. ಆದರೆ ಒಬ್ಬ ವ್ಯಕ್ತಿಯ ನಿಜವಾದ ವ್ಯಕ್ತಿತ್ವ ಗೊತ್ತಾಗುವುದು ಅವನ ಪರೀಕ್ಷೆಯ ಸಮಯದಲ್ಲಿ ಕಷ್ಟದ ಸಮಯದಲ್ಲಿ ಇದನ್ನು ಶ್ರೀರಾಮಕೃಷ್ಣರು ಈ ಗಿಳಿಯ ದೃಷ್ಟಾಂತದ ಮುಖಾಂತರ ಎಷ್ಟು ಚೆನ್ನಾಗಿ ಹೇಳಿದ್ದಾರೆ ನೋಡಿ.



ಒಬ್ಬ ಶ್ರೀಮಂತನ ಮನೆಯಲ್ಲಿ ಗಿಳಿಗಳನ್ನು ಸಾಕಿದ್ದನು. ಅವುಗಳಿಗೆ ಅನೇಕ ಪದಗಳನ್ನೂ ಸಹ ಕಲಿಸಿರುತ್ತಾನೆ. ಹೆಚ್ಚಾಗಿ ರಾಮ ರಾಮ ಶಬ್ದವನ್ನು ಕಲಿಸಿರುತ್ತಾರೆ. ಮನೆಯವರು ಮತ್ತು ಮನೆಗೆ ಬಂದ ಅಥಿತಿಗಳು ಗಿಳಿಯನ್ನು ಮಾತನಾಡಿಸಿದಾಗ ಅವರು ಹೇಳಿದಂತೆ ರಾಮ ರಾಮ ಎಂದು ಹೇಳಿ ಎಲ್ಲರನ್ನೂ ಆನಂದಿಸುತ್ತಿದೆ ಎಂದು ಎಲ್ಲರೂ ಸಹ ಭಾವಿಸಿರುತ್ತಾರೆ.

ಈ ಗಿಳಿ ರಾಮನಾಮ ಹೇಳುತ್ತಿದೆ ಎಂದು. ಹೀಗೆ ರಾಮ ನಾಮ ಹೇಳುತ್ತಿರುವಾಗ ಅಕಸ್ಮಾತಾಗಿ ಒಂದು ಬೆಕ್ಕು ಆ ಗಿಳಿಯನ್ನು ಹಿಡಿಯಲು ಬಂದಾಗ ಆ ಗಿಳಿ ರಾಮ ರಾಮ ಎನ್ನದೇ ಕ್ಯಾ...ಕ್ಯಾ.. ಎಂದು ಕೂಗುತ್ತಾ ಹಾರಿಹೋಗುತ್ತದೆ. ಎಕೆಂದರೆ ಅದು ಅದರ ನಿಜಸ್ವಭಾವ. ರಾಮ ನಾಮ ಹೇಳುವುದು ಅದರ ಸ್ವಭಾವ ಅಲ್ಲ.ಅದರಂತೆಯೆ ವ್ಯಕ್ತಿಯೂ ಸಹ ಒಳ್ಳೆಯ ಮಾತನಾಡಬಹುದು ಒಳ್ಳೆಯವರಂತೆ ನಟಿಸಲೂಬಹುದು ಆದರೆ ಅವನ ವ್ಯಕ್ತಿತ್ವ ಸಹಜವಾಗಿ ಪರೀಕ್ಷೆಯ ಸಮಯದಲ್ಲಿ ಪ್ರಕಟವಾಗುತ್ತದೆ.

"ಯಾರು ತಮ್ಮ ನಿಜವಾದ ಸ್ವಭಾವವನ್ನು ಮುಚ್ಚಿಡಲಾರರು."

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್




# ಚಿಟ್ಟೆ ಗುರುತು

ಮೂಡಣ ಕೆಂಪು ಹಾಸಿನಿಂದ ಶೃಂಗರಿಸಿ ಹೊಸ ದಿನದ ಪ್ರಾರಂಭಕ್ಕೆ ಸೂರ್ಯನನ್ನು ಆಹ್ವಾನಿಸಲು ಕಾಯುತ್ತ ಕುಳಿತಿದ್ದ ಹುಂಜ ಸೂರ್ಯ ಹುಟ್ಟುತ್ತಿದ್ದಂತೆ ಸಂತಸದಿಂದ ಕ್ಕೊ...ಕ್ಕೊ...ಕ್ಕೋ.... ಎಂದು ಕೂಗಲಾರಂಭಿಸಿತು ತಿಳಿದೋ




ತಿಳಿಯದೋ ಹಳ್ಳಿಯಲ್ಲಿದ್ದವರೆಲ್ಲಾ ಎದ್ದು ತಮ್ಮ ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಚುರುಕುಗೊಳಿಸಿದರು. ಸುಮಾರು ಹತ್ತು ಗಂಟೆಯ ಸಮಯ ತಿಂಡಿ ಮುಗಿಸಿ. ಅಂದು ಮನೆಯಲ್ಲೇ ಇದ್ದ ನಾನು ಮತ್ತೆ ನನ್ನ ಗೆಳೆಯರು ಮಾತಿಗಿಳಿದೆವು.ಸುಮಾರು ಹನ್ನೆರಡು ಗಂಟೆ ಬಿಸಿಲಿನ ಜಳಕ್ಕೆ ಈಜಾಡುವ ಮನಸ್ಸಾಗಿ ನಮ್ಮೂರಿನ ಪಕ್ಕದಲ್ಲೇ ಇದ್ದ ಒಂದು ಟ್ಯಾಂಕಿಗೆ ಈಜಲೆಂದು ಹೋದೆವು. ಅಲ್ಲಿ ನೀರಿನ ತೊರೆಯ ಬಳಿ ಕೆಲವು ಚಿಟ್ಟೆಗಳು ನೀರನ್ನು ಹೀರುತ್ತಾ ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಹಾರಾಡುತ್ತಿದ್ದವು. ದೂರಕ್ಕೆ ನೋಡಲು ಬಿಳಿ ಮತ್ತು ಹಳದಿ ಬಣ್ಣವಿದ್ದರೂ ಗಮನಿಸಿ ನೋಡಿದಾಗ ಗಂಡು ಮತ್ತು ಹೆಣ್ಣು ಚಿಟ್ಟೆಗಳು ನೋಡಲು ಬಣ್ಣದಲ್ಲಿ ಕೆಲವು ಭಿನ್ನತೆಗಳನ್ನು ಕಾಣಬಹುದು.



ಗಂಡು ಚಿಟ್ಟೆಯ ರೆಕ್ಕೆಯ ಮೇಲ್ಭಾಗ ಬಿಳಿ ಹಳದಿಬಣ್ಣದೊಂದಿಗೆ ಬೂದು ಬಣ್ಣದ ಗೆರೆಗಳಿಂದ ಕೂಡಿರುತ್ತದೆ. ಅವೇ, ಕಾಮನ್ ಗಲ್ ಚಿಟ್ಟೆಗಳು. ಸಾಮಾನ್ಯವಾಗಿ ಕೃಷಿ ಭೂಮಿಯ ಸುತ್ತಮುತ್ತ , ಕುರುಚಲು ಕಾಡುಗಳಲ್ಲಿ ಕಾಣಸಿಗುವ ಈ ಚಿಟ್ಟೆಗಳ ಹೆಸರು ಕಾಮನ್ ಗಲ್ ಭಾರತ, ಪಾಕಿಸ್ತಾನ, ಭೂತಾನ್, ನೇಪಾಳ ಮೊದಲಾದ ದೇಶಗಳಲ್ಲಿ ಕಾಣಸಿಗುವ ಸಾಮಾನ್ಯ ಚಿಟ್ಟೆಯಾಗಿದೆ. ಬೇಸಿಗೆಯಲ್ಲಿ ಹೆಚ್ಚಿನ ಸಂಖ್ಯೆಯ ಚಿಟ್ಟೆಗಳು ತೇವಾಂಶವುಳ್ಳ ಜಾಗದಲ್ಲಿ ನೀರನ್ನು ಹೀರುತ್ತ ಕುಳಿತುಕೊಳ್ಳುವ ಇವು ಹೂಗಳ ಮಕರಂದವನ್ನು ಹೀರುತ್ತವೆ.40 ರಿಂದ 65 ಮಿಮಿ ಅಗಲದ ರೆಕ್ಕೆಯನ್ನು ಹೊಂದಿರುವ ಇವು 1200 ಮೀ ಎತ್ತರಕ್ಕೆ ಹಾರಬಲ್ಲ ಸಾಮರ್ಥ್ಯವನ್ನು ಹೊಂದಿವೆ.

- ಮಹದೇವ ಕೆ.ಸಿ





# ಹಕ್ಕಿಲೋಕ

* ಆನೆ ಸವಾರಿ

**ಇಂಗ್ಲೀಷ್ ಹೆಸರು : Cattle Egret**

**ವೈಜ್ಞಾನಿಕ ಹೆಸರು : *Bubulcus ibis***

ಚಿಕ್ಕರಾಗಳ್ಳಿ ಬೆಟ್ಟದ ತಪ್ಪಲಲ್ಲಿ ಫಾರೆಸ್ಟ್ ನವರ ಚೆಕ್ ಡ್ಯಾಮಿನ ಕೆಲಸ ನಡೆಯುತ್ತಿತ್ತು. ಗುಟ್ಟೆಯು ಕೆಲಸವನ್ನು ನೋಡಿಬರುವಂತೆ ಬುಲಾವ್ ಬಂದು ಕಾಡಿನ ಕಡೆಗೆ ಹೊರಡಲು ಸಿದ್ಧನಾಗಿ ಉಪ್ಪುನೀರು ಹಳ್ಳದ ಕಾಲುದಾರಿಯಲ್ಲಿ ನಡೆದು ಹೋಗುತ್ತಿದ್ದ. ಎದುರು ಬಂದ ನನ್ನನ್ನು "ನಾನು ಒಬ್ಬನೆ, ಕಾಡಿನ ಕಡೆ ಬರ್ತೀಯಾ?" ಎಂದ. ಹೇಗಿದ್ದರೂ ಸಂಜೆ ಸ್ವಲ್ಪ ಓಡಾಡಿ ಬರಬೇಕು, ಅದರ ಬದಲು ಈಗಲೇ ಗುಟ್ಟೆಯ ಜೊತೆ ಹೋಗಿಬಂದರೆ ಹೇಗೆ ಎಂದು ಯೋಚಿಸಿ ಗುಟ್ಟೆಯ ಜೊತೆ ಹೊರಡಲು ಸಿದ್ಧನಾದೆ ಸಂಜೆ ನಾಲ್ಕು ಗಂಟೆಯಾಗಿತ್ತು.



ಹಾಗೆಯೇ ಕಾಡಿನ ಕಾಲುದಾರಿಯಲ್ಲಿ ನಡೆಯುತ್ತ ಹೋಗುತ್ತಿದ್ದೆವು, ಹೋಗುತ್ತಾ. . . ಹೋಗುತ್ತಾ. . . ಕಾಲುದಾರಿ ಕಿರಿದಾಗುತ್ತಾ ಕಾಡಿನ ಮರ, ಪೊದೆಗಳು ದೊಡ್ಡದಾಗುತ್ತಾ ಹೋಗುತ್ತಿತ್ತು. ಮರಗಳ ಕೆಳಗೆ ಸಂದಿಯಂತಹ ಇಕ್ಕಟ್ಟು ದಾರಿಯಲ್ಲಿ ಹಾಗೆಯೇ ಮುಂದಕ್ಕೆ ನಡೆಯುತ್ತಿದ್ದಾಗ ಹಸಿಯ ನೆಲದ ಮೇಲೆ ಆನೆಗಳ ಹೆಜ್ಜೆಗಳು ಗೋಚರಿಸಿದವು. ಬೆಳಗೆಯೇ ಸ್ವಲ್ಪ ಮಳೆಯ ಹನಿಗಳು ಬಿದ್ದಿದ್ದರಿಂದ ನೆಲವೆಲ್ಲ ಒದ್ದೆಯಾಗಿತ್ತು. ಆನೆಯ ಹೆಜ್ಜೆಗಳು ಎದ್ದು ಕಾಣುತ್ತಿದ್ದವು. ಗುಟ್ಟೆಯು ಹಿಂದೆ ಬರುತ್ತಿದ್ದ ನನಗೆ ಹೆಜ್ಜೆಗಳನ್ನು ತೋರಿಸಿ ಹೀಗೆ ಆನೆಗಳು ಹೋಗಿದಾವೆ ಎಂದು ಆನೆಯ ಪಾದದ ಉಗುರುಗಳನ್ನು ತೋರಿಸಿ ಹೇಳಿದ. ಗಂಡಾನೆಗಳು, ಹೆಣ್ಣಾನೆಗಳು, ಮರಿಗಳು ಎಲ್ಲಾ ಹೋಗಿರುವ ಹೆಜ್ಜೆಗಳನ್ನು ತೋರಿಸಿದ. ಆನೆಯ ಹೆಜ್ಜೆಗಳಂತು ತುಂಬ ಸ್ಪಷ್ಟವಾಗಿಯೇ ಕಂಡವು. ನನಗೆ ಸ್ವಲ್ಪ ಎದೆಯಲ್ಲಿ ದಿಗಿಲು ಮೂಡಿದರೂ, ಗುಟ್ಟೆ ಇದ್ದುದಕ್ಕೆ ಸ್ವಲ್ಪ ಧೈರ್ಯಕೂಡ ಆಗಾಗ ಬಂದು, ಬೆವರಲು ಶುರುವಾಗಿತ್ತು.



ಹಾಗೆ ಮುಂದೆ ಇನ್ನೊಂದಷ್ಟು ದೂರ ನಡೆಯಿತ್ತಿದ್ದಾಗ ಆನೆಯ ಲದ್ದಿಗಳು ಬಿದ್ದಿದ್ದವು, ಗುಟ್ಟೆಯು ಲದ್ದಿಗಳನ್ನು ತೋರಿಸುತ್ತಾ "ಏ. . . ಏ. . . ಇಲ್ಲಿ ನೋಡು, ಆನೆಗಳು ಈಗ ತಾನೆ ಹೋಗಿದ್ದಾವೆ !, ಲದ್ದಿಯಲ್ಲಿ ಹೊಗೆಯಾಡುತ್ತಿದೆ.

ಇಲ್ಲೇ ಎಲ್ಲೋ ಆನೆಗಳು ಇದಾವೆ!. ಎಂದು ಮೆದು ಧ್ವನಿಯಲ್ಲಿ ಹೇಳಿದ. ಇನ್ನೂ ಸ್ವಲ್ಪ ಮುಂದೆ ನಡೆದು "ಗುಂಪಿನಲ್ಲಿ ಗಂಡಾನೆಯೂ ಇದೆ. ಹುಷಾರಾಗಿ ಹೋಗಬೇಕು" ಎಂದು ನನಗೆ ಎಚ್ಚರಿಸಿದ. ನನಗೆ ಅನುಮಾನ ಬಂತು!, ಗುಂಪಿನಲ್ಲಿ ಗಂಡಾನೆ ಇರುವುದು ಗುಟ್ಟಿಗೆ ಹೇಗೆ ಗೊತ್ತು!. ಹೆಜ್ಜೆಯನ್ನು ನೋಡಿ ಗಂಡು-ಹೆಣ್ಣು ಎಂದು ಹೇಳುವುದು ಹೇಗೆ!. ಎಂದು ಯೋಚಿಸುತ್ತಾ ಗುಟ್ಟಿಯನ್ನೆ ಹಿಂಬಾಲಿಸುತ್ತಿದ್ದೆ. ಇಲ್ಲ, ಕೇಳಬೇಕು ಗುಟ್ಟಿಯನ್ನ ಎಂದು . "ಗುಟ್ಟಣ್ಣ. . . ಗುಟ್ಟಣ್ಣ. . . ಎಂದು ಸಣ್ಣನೆಯ ಧ್ವನಿಯಲ್ಲಿ ಕರೆದೆ "ನಿಂಗೆ ಗುಂಪಿನಲ್ಲಿ ಗಂಡಾನೆಗಳು ಇರುವುದು ಹೇಗೆ ಗೊತ್ತಾಯಿತು!" ಎಂದೆ. ಮತ್ತೆ ಹಿಂದಕ್ಕೆ ಲದ್ದಿಗಳ ಬಳಿಗೆ ಕರೆದು ವಿವರಿಸಲು ಶುರುಮಾಡಿದ. "ಈ ಲದ್ದಿ ಇದೆಯಲ್ಲ ಇದು ಗಂಡಾನೆದು ಎಂದು ತೋರಿಸಿದ. ಅದ್ರಲ್ಲೇನಿದೆ ಗುಟ್ಟಣ್ಣ ಹೆಣ್ಣಾನೇನು ಹಾಗೆ ತಾನೆ ಲದ್ದಿ ಅಕೋದು" ಎಂದೆ. "ಏ. . . ಇಲ್ಲ ಮಾರಾಯ ಇಲ್ನೋಡು ಗಂಡಾನೆ ಆದ್ರೆ ಲದ್ದಿ ಹಿಂದೆ ಬೀಳುತ್ತೆ, ಗಂಜಲ (ಉಚ್ಚೆ) ಮುಂದೆ ಬೀಳುತ್ತೆ, ಅದೆ ಹೆಣ್ಣಾನೆ ಆದ್ರೆ ಲದ್ದಿ, ಗಂಜಲ ಎಲ್ಲ ಓಟ್ಟೊಟ್ಟಿಗೆ ಬಿದ್ದಿರುತ್ತೆ" ಎಂದ. ಗುಟ್ಟಿಯು ಆನೆಗಳ ಬಗ್ಗೆ ಇಷ್ಟೊಂದು ತಿಳಿದುಕೊಂಡಿರುವುದು ನನಗೆ ಖುಷಿಯು , ಅಚ್ಚರಿಯು ಆಯಿತು.

ಹಾಗೆಯೇ ಆನೆಗಳ ಹೆಜ್ಜೆ ಗುರುತುಗಳನ್ನು ಹಿಡಿದು ಹಳ್ಳವೊಂದನ್ನು ಇಳಿದೆವು, ಹಳ್ಳದಲ್ಲಿಯೇ ಆನೆಗಳು ಠಿಕಾಣಿ ಹೂಡಿರುತ್ತವೆ ಎಂದು ಅನುಮಾನದಿಂದ ಬಲು ಎಚ್ಚರಿಕೆಯಿಂದ ನನ್ನನ್ನು ಕರೆದುಕೊಂಡು ಹೋದ . ಹಳ್ಳದಲ್ಲಿನ ಒಂದು ಸಣ್ಣ ಬಂಡೆಯ ಮೇಲೆ ಏರಿಸಿ ಇಲ್ಲೇ ಕುಳಿತಿಕೊ ಸ್ವಲ್ಪ ಮುಂದೆ ಹೋಗಿ ಆನೆಗಳು ಇರುವಿಕೆಯನ್ನು ನೋಡಿ ಬರುತ್ತೇನೆ ಎಂದು ಹೊರಟ. ಒಬ್ಬನೇ ಗುಡ್ಡದ ಮೇಲೆ ಭಯವಾದರು ಧೈರ್ಯಮಾಡಿ ಕುಳಿತುಕೊಂಡಿದ್ದೆ. ಗುಟ್ಟಿಯು ಹೋಗಿದ್ದ ದಾರಿಯನ್ನೇ ನೋಡುತ್ತಾ ಕುಳಿತೆ ಹತ್ತದಿನೈದು ನಿಮಿಷದ ನಂತರ ಗುಟ್ಟಿ ಮರಳಿ ನನ್ನ ಮುಂದೆ ಪ್ರತ್ಯಕ್ಷನಾಗಿ ಮುಂದೆ ಆನೆಗಳು ಇರುವುದು ಏನು ಕುರುಹುಗಳು ಸಿಗಲಿಲ್ಲ ಹಾಗೇ ಮುಂದೆ ಹೋಗಿದ್ದಾವೆ. ನಮಗೂ ಅವಕ್ಕೂ ತುಂಬ ದೂರ ಇರಬಹುದು. ಕೆರೆಯು ಇಲ್ಲೇ ಪಕ್ಕದಲ್ಲೆ ಇರೋದು ಕೆಲಸ ಏನಾಗಿದೆ ಎಂದು ಹಾಗೆ ನೋಡಿಕೊಂಡು ಬಂದಿದ್ದೇನೆ , ಇನ್ನೂ ಮುಂದೆ ಹೋಗುವ ಅಗತ್ಯ ಇಲ್ಲ. ಹೀಗೆ ಮೇಲಕ್ಕೆ ಗುಡ್ಡೆ ಹತ್ತಿಹೋಗೋಣ ಎಂದು ಎಡಕ್ಕಿದ್ದ ಗುಡ್ಡವನ್ನು ಹತ್ತಲು ಶುರುಮಾಡಿದೆವು.



ಸಂಜೆಯಾದರು ಮೊಡಗಳು ಇಲ್ಲದೆ ಇದ್ದುದ್ದರಿಂದ ತಿಳಿಬಿಸಿಲು ಮರಗಳ ಗದ್ದಿಗೆ ಬಣ್ಣ ಬಣ್ಣವಾಗಿ ಚಿತ್ರ ಬಿಡಿಸಿದಂತೆ ಭಾಸವಾಗುತ್ತಿತ್ತು. ಗುಡ್ಡವೇರಿ ಆ ಕಡೆಯ ಹಳ್ಳಕ್ಕೆ ಇಳಿಯುತ್ತಿದ್ದೆವು, ಗುಟ್ಟಿಯು ತಟಕ್ಕನೆ ನಿಂತು ಸನ್ನೆ ಮಾಡಿ ಮುಂದೆ ನೋಡುವಂತೆ ಹೇಳಿದ. ಮುಂದೆ ಸ್ವಲ್ಪ ದೂರದಲ್ಲಿ ಆನೆಗಳ ಹಿಂಡು ಮೇಯುತ್ತಿತ್ತು. ಅದು ಸ್ವಲ್ಪ ಬಯಲಾದ ಅಲ್ಪಸ್ವಲ್ಪ ಜೌಗು ಪ್ರದೇಶವಾಗಿದ್ದರಿಂದ ಹುಲ್ಲು ಎತ್ತರಕ್ಕೆ ಬೆಳೆದು ನಿಂತ್ತಿತ್ತು. ಹುಲ್ಲಿನ ನಡುವೆ ಆನೆಗಳ ಹಿಂಡು ಆರಾಮವಾಗಿ ಮೇಯುತ್ತಾ ನಿಂತಿದ್ದವು. ಜೊತೆಯಲ್ಲಿ ಎಳೆಯ ಮರಿಗಳು ಅಮ್ಮನ ನಡುವೆ ಆಟವಾಡುತ್ತಿದ್ದವು. ಸಲಗಗಳ ಬೆನ್ನ ಮೇಲೆ ಬೆಳ್ಳಕ್ಕಿಗಳು ಸವಾರಿ ಮಾಡುತ್ತಿದ್ದವು. ನೋಡಲು ಮನೋಹರವಾದ ದೃಶ್ಯವಾದರೂ ನಮಗೂ ಆನೆಗಳ ಹಿಂಡಿಗೂ

ಸ್ವಲ್ಪ ಅಂತರ ಇದ್ದಿರಬಹುದು, ನಮ್ಮ ನೆಲೆ ತುಂಬ ಅತಂತ್ರವಾದರೂ ಆನೆಗಳ ನಡವಳಿಕೆ ಶಾಂತವಾಗಿದ್ದರಿಂದ ನೆಮ್ಮದಿ ಇದ್ದರೂ. . . ಮರಿಗಳಿದ್ದುದರಿಂದ ಮತ್ತು ಗಾಳಿ ನಮ್ಮ ಕಡೆಯಿದ ಆನೆಗಳ ದಿಕ್ಕಿಗೆ ಬೀಸುತ್ತಿದ್ದರಿಂದ ಯಾವಾಗಬೇಕಾದರೂ ಸಲಗಗಳು ನಮ್ಮನ್ನು ಅಟ್ಟಲು ಸಿದ್ಧವಾದಂತೆ ಕಾಣುತ್ತಿದ್ದವು.

ಆ ವೈವಿಧ್ಯಮಯ ದೃಶ್ಯವನ್ನ ತೋರಿಸಿದಕ್ಕೆ ಗುಟ್ಟಿಗೆ ಮನಸ್ಸಿನಲ್ಲೆ ಧನ್ಯವಾದಗಳನ್ನು ಹೇಳುತ್ತಿದ್ದೆ. ಅದು ಎಂತಹ ದೃಶ್ಯ!, ಪಡುವಣದಲ್ಲಿ ಸೂರ್ಯ ಮುಳುಗುತ್ತಿದ್ದ, ಸೂರ್ಯನ ಆ ತಿಳಿ ಬಿಸಿಲು ಆನೆ ಹಿಂಡಿನ ಮೇಲೆ ಬಿದ್ದಿದ್ದು, ಆ ಹಚ್ಚ ಹಸುರು ಹುಲ್ಲಿನ ಮೈದಾನ ಹಸುರು ಬಣ್ಣಗಳನ್ನು ಬಳಿದಂತೆ ಭಿನ್ನ ಬಿನ್ನವಾಗಿ ಕಂಡಿತು. ಆನೆಗಳ ಮೇಲೆ ಸವಾರಿ ಮಾಡುತ್ತಿದ್ದ ಬೆಳ್ಳಕ್ಕಿಗಳು ನೋಡಲು ಮುತ್ತಿನಮಣಿಗಳಂತೆ ಪಳಪಳಿಸುತ್ತಿದ್ದವು. ಈ ಬೆಳ್ಳಕ್ಕಿಗಳನ್ನು ದನಗಳ ಬಳಿ ನೋಡಿದ್ದೇನೆ ಆದರೆ ಆನೆಗಳ ಬಳಿ ನೋಡಿದ್ದು ಇದೆ ಮೊದಲು. ಸದಾ ಆಹಾರಾನ್ವೇಷಣೆ ಮಾಡುತ್ತಾ ದನಗಳ ಬಳಿ ಇರುವುದಕ್ಕೆ ಈ ಹಕ್ಕಿಗೆ ಗೋವಕ್ಕಿ ಎಂದು ಹೆಸರು. ಇಂಗ್ಲೀಷ್ ನಲ್ಲಿ ಕ್ಯಾಟಲ್ ಈಗ್ರೆಟ್ (Cattle Egret) ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನೀವು ಕೂಡ ನೋಡಿರುತ್ತೀರಿ ಸದಾ ಹುಳ-ಹುಪ್ಪಟೆಗಳನ್ನರಸುತ್ತಾ ಹಸು-ಎಮ್ಮೆಗಳ ಬಳಿ ಇರುತ್ತವೆ. ಆದರೆ ನಾನು ಅದೃಷ್ಟವಂತ ಆನೆಗಳ ಮೇಲೆ ಸವಾರಿ ಮಾಡುವುದನ್ನು ನೋಡಿದ್ದೀನಿ!.



ಈ ಗೋವಕ್ಕಿಗೆ ಜಾನುವಾರು ಬೆಳ್ಳಕ್ಕಿ ಅಂತಲು ಹೆಸರು ಉಂಟು. ಇವು ಸಾಮಾನ್ಯವಾಗಿ ಕೋಳಿಗಿಂತ ಎತ್ತರವಾದ ಬಿಳಿ ಹಕ್ಕಿ, ಬಲಿಷ್ಟವಾದ ಕೊಕ್ಕು ಹಳದಿ; ನೀಳವಾದ ಕಾಲುಗಳು ಕಂದು ಬಣ್ಣದ್ದು; ಈ ಗೋವಕ್ಕಿಗಳು ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಹಕ್ಕಿಯ ತಲೆ, ಕತ್ತು ಹಾಗೂ ಬೆನ್ನಿನ ಮೇಲಿರುವ ಪುಕ್ಕಗಳು ಹಳದಿಯಾಗಿರುತ್ತವೆ. ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡನ್ನು ಕಟ್ಟಿ, ನವೆಂಬರ್-ಮಾರ್ಚ್ ತಿಂಗಳಲ್ಲಿ ಐದರಿಂದ ಒಂಬತ್ತು ಮಂದ ನೀಲಿ ಮೊಟ್ಟೆಗಳಿಟ್ಟು ಸುಮಾರು ಇಪ್ಪತ್ತೆರಡು ದಿನಗಳಲ್ಲಿ ಕಾವು ಕೊಟ್ಟು ಮರಿಮಾಡುತ್ತವೆ.

- ಅಶ್ವಥ ಕೆ.ಎನ್

# ವಿದ್ಯಾರ್ಥಿಗಾಗಿ ವಿಜ್ಞಾನ

ವಿವಿ ಅಂಕಣ

## * ಹೆಚ್ಚಾದ ತಾಪಮಾನಕ್ಕೆ ಸಾಲಮಂಡರ್ ಸಣ್ಣದಾಯ್ತು!


ಪ್ರಚೋದನೆಗೆ ತಕ್ಕಂತೆ ಪ್ರತಿಕ್ರಿಯಿಸುವುದು ಪ್ರತಿ ಜೀವಿಯ ಮೂಲಭೂತ ಲಕ್ಷಣ . ಬದಲಾಗುತ್ತಿರುವ ವಾತಾವರಣದ ಏರುಪೇರುಗಳಿಗೆ ಹಲವು ಜೀವಿಗಳು ಹೊಂದಿಕೊಳ್ಳದೆ ನಶಿಸಿದರೆ ಕೆಲವು ವಿಧವಿಧವಾದ ಮಾರ್ಪಾಡುಗಳನ್ನು ಮಾಡಿಕೊಂಡು ಸ್ಪಂದಿಸುತ್ತವೆ. ಒಂದು ಪ್ರದೇಶದ ವಾತಾವರಣದಲ್ಲಿ ತಾಪ ಹೆಚ್ಚಾದರೆ ಕಡಿಮೆ ತಾಪದ ಪ್ರದೇಶಗಳಿಗೆ ಕೆಲವು ಪ್ರಾಣಿಗಳು ಶಾಶ್ವತವಾಗಿ ವಲಸೆ ಹೋಗಬಹುದು ಅಥವಾ ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ತಮ್ಮ ದೇಹ ರಚನೆಯನ್ನು ಬದಲಿಸಿಕೊಳ್ಳುತ್ತವೆ. ಹೀಗೆ ಹೊಂದಾಣಿಕೆ ಮಾಡಿಕೊಂಡು ಬದುಕಲು ಸಾಧ್ಯವಾಗದಿದ್ದರೆ ಆ ಜೀವಿ ವಂಶನಾಶದ ಕಡೆಗೆ ವಾಲುತ್ತದೆ. ದಕ್ಷಿಣ ಆಪಲಾಚಿನ್ ಪ್ರದೇಶದ ಸಾಲಮಂಡರ್ ಗಳು ಮೊದಲನೇ ದಾರಿಯನ್ನು ಹಿಡಿದಿವೆ . ಇಲ್ಲಿ ಮೇನ್ ಲೋಸಿ ಜಾತಿಯ ಸಾಲಮಂಡರ್ ಗಳು ಕಳೆದ 55 ವರ್ಷಗಳಲ್ಲಿ ಹೆಚ್ಚುತ್ತಿರುವ ವಾತಾವರಣದ ತಾಪದ ಪರಿಣಾಮದಿಂದ ಉಷ್ಣತೆಯ ಏರಿಕೆಯಿಂದ ಅವುಗಳ ದೇಹವನ್ನು ಶೇ 18% ರಷ್ಟು ಕುಗ್ಗಿಸಿಕೊಂಡು ಕುಬ್ಜವಾಗುತ್ತಿವೆ ಎಂದು ಕೆರೆನ್ ಲೀಪ್ ಎಂಬ ವಿನಿ ಮತ್ತು ಅವರ ತಂಡ ಕಂಡು ಹಿಡಿದಿದ್ದಾರೆ.



ವಾತಾವರಣದಲ್ಲಿ ಉಂಟಾಗುವ ಬದಲಾವಣೆಗೆ ಶೀತರಕ್ತ ಪ್ರಾಣಿಯ ಗುಂಪಿಗೆ ಸೇರುವ ಉಭಯ ಜೀವಿಗಳು ಬಹು ಬೇಗ ಪ್ರತಿಕ್ರಿಯಿಸುತ್ತವೆ. ಚರ್ಮದ ಮೂಲಕ ಉಸಿರಾಡುವ ಸಾಲಮಂಡರ್ ಗಳು ಸಹ ಉಭಯ ಜೀವಿ ಗುಂಪಿಗೆ ಸೇರಿವೆ. 2011-12ರಲ್ಲಿ ಕೆರೆನ್ ಲೀಪ್ ರ ತಂಡವು ಆಲ್ಪೈನ್ ಪರ್ವತ ಪ್ರದೇಶದ ಸುಮಾರು 80 ವಿವಿಧ ಜಾಗಗಳಲ್ಲಿ ನೂರಾರು ಸಾಲಮಂಡರ್ ಗಳನ್ನು ಸಂಗ್ರಹಿಸಿ ಅವುಗಳ ದೇಹದ ಗಾತ್ರವನ್ನು 1950-60 ರಲ್ಲಿ ಅದೇ ಪ್ರದೇಶದಿಂದ ಸಂಗ್ರಹಿಸಿ ಮೂಸಿಯಂ ನಲ್ಲಿಟ್ಟಿದ್ದ ಸ್ಪೆಸಿಮನ್ ಗಳಿಗೆ ಹೋಲಿಸಿ ನೋಡಿದ್ದಾರೆ. ಆಗ ಅವರಿಗೆ ೫೦ ವರ್ಷಗಳಲ್ಲಿ ಸಾಲಮಂಡರ್ ಗಳ ಗಾತ್ರ ಸುಮಾರು 8% ನಿಂದ 80% ನಷ್ಟು ಗಾತ್ರದಲ್ಲಿ ಕುಗ್ಗಿ ಹೋಗಿರುವುದು ಕಂಡುಬಂದಿದೆ.ವಾತಾವರಣದ ತಾಪ ಹೆಚ್ಚಿದಂತೆಲ್ಲಾ ದೇಹದ ಮೆಟಾಬಲಿಕ್ ರೇಟ್ ಹೆಚ್ಚಾಗಿ ದೇಹವು ಬಳಸುವ ಶಕ್ತಿಯ ಪ್ರಮಾಣ ಹೆಚ್ಚುತ್ತದೆ ಇದರ ಪರಿಣಾಮದಿಂದ ಸಾಲಮಂಡರ್ ಗಳ ದೇಹದ ಗಾತ್ರ ಕುಗ್ಗಿದೆ ಎಂದು ತರ್ಕಿಸಿದ್ದಾರೆ. ಈ ಬದಲಾವಣೆಯ ಪರಿಣಾಮಗಳು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಈ ಬದಲಾದ ಗಾತ್ರದ ಪರಿಣಾಮದಿಂದ ಸಾಲಮಂಡರ್ ಗಳ ಆಹಾರ, ಚಲನವಲನ, ಸಂತಾನೋತ್ಪತ್ತಿ ಹಾಗು ಜೀವಿಸುವಲ್ಲಿ ಸ್ಪರ್ಧೆ ಏರ್ಪಡಬಹುದೆಂದು ಊಹಿಸಿದ್ದಾರೆ. ಈ ಕುಬ್ಜಗೊಂಡ ಸಾಲಮಂಡರ್ ಗಳ ದೇಹವು ಒಣ ಶುಷ್ಕ ವಾತಾವರಣಕ್ಕೆ ಹೊಂದಿಕೊಂಡು ಬದುಕಲು ಸಹಾಯಕವಾಗಬಹುದು ಅಥವಾ ಈ ಬದಲಾವಣೆಯೇ ಸಾಲಮಂಡರ್ ಗಳ ಸಂತತಿಗೇ ಮುಳುವಾಗಬಹುದು ಎನ್ನುತ್ತಾರೆ ವಿಜ್ಞಾನಿಗಳು.

- ಶಂಕರಪ್ಪ ಕೆ.ಪಿ

# ಕಾನನ ಬಂಧ



### ಎಡದಿಂದ ಬಲಕ್ಕೆ

1. ಸರಸರನೆ ನೆಲದ ಮೇಲೆ ಹರಿದಾಡುವ ಜೀವಿಗಳ ಪ್ರಭೇದ (4)

3. ಸಸ್ಯವನ್ನೇ ಸೇವಿಸಿ ಬದುಕುವ ಜೀವಿ (4)

5. ಕೈಯಿಂದ ಹೊಡೆದಾಡುವ ವೀರನ ಬಳಿ ಹಳದಿ ಬಣ್ಣದ ಹೂವಿದೆ (4)

6. ಈ ಪಕ್ಷಿಗೆ ಹರಟೆ ಕೊಚ್ಚುವುದೇ ಕೆಲಸ (5)

8. ತವರು ಮನೆಯಲ್ಲಿ ಹೂವೊಂದು ಕೆಸರಿನಲ್ಲಿ ಅರಳಿದೆ (3)

10. ಹಸಿರು ಬಣ್ಣದ ಈ ಹಕ್ಕಿ ಸದಾ ಕುಟು. . .ಕುಟು. . .ಎನ್ನುತ್ತದೆ (3)

12.  ಮಗನ ನಡುವೆ ಸೇರಿದ ವಾನರ (2)

14.  ಜೇನು ಹುಳುವೇ ಈ ಹಕ್ಕಿಯ ಮುಖ್ಯ ಆಹಾರ (4)

16. ಕರ್ನಾಟಕದ ಪಶ್ಚಿಮಘಟ್ಟಗಳಲ್ಲಿ ವಾಸಿಸುವ ಈ ಜನಾಂಗದವರು ಹಕ್ಕಿಗಳನ್ನು ಹಿಡಿದು ಬದುಕುತ್ತಾರೆ (4)

18. ಈ ಹಳದಿ ಬಣ್ಣದ ಹಕ್ಕಿಯ ಬುರುಡೆ ಸುಂದರವಾಗಿದೆ (7)

### ಮೇಲಿನಿಂದ ಕೆಳಕ್ಕೆ

1. ಇದು ಸಸ್ಯಗಳದ್ದೇ ಪ್ರಪಂಚ (4)

2. ನಮ್ಮ ಸುತ್ತ ಮುತ್ತಲಿನ ವಾತಾವರಣ (4)

4.ಗೊಲ್ಲರ ಜನಾಂಗ ಒಂದು ಹಾವುಗಳೊಡನೆ ಜೀವಿಸುತ್ತಿದೆ.(4)

7. ಈ ಕಾಡು ರಕ್ಷಿಸಲ್ಪಟ್ಟಿದೆ (5)

9. ಅಶ್ವವೊಂದು ಇಲ್ಲಿ ತಲೆಕೆಳಗಾಗಿದೆ (3)

11. ಸಣ್ಣ ಪುಟ್ಟ ಪೊದೆಗಳು ಹಾಗೂ ಗಿಡಗಳ ಮೇಲೆ ವಾಸಿಸುವ ಈ ಹಕ್ಕಿ ಸುಂದರವಾಗಿ ಹಾಡುತ್ತದೆ (4)

12. ಈ ಪುಷ್ಪವು ಯಾಕೋ ಮಂದವಾಗಿದೆಯಲ್ಲ? (3)

13. ಈ ಕುದುರೆ ಉರಗದ ಸಂಬಂಧಿಯೇನಲ್ಲ (3)

15. ಹಾಲು ಒಸರುವ ಗಿಡವಾದರೂ ತುಂಬಾ ಮುಳ್ಳುಗಳಿವೆ (4)

17. ಈ ಹಕ್ಕಿಗೆ ಬುಲ್ ಬುಲ್ ಎಂದೂ ಕರೆಯುತ್ತಾರೆ (4)

### ಕಾನನ ಬಂಧ  ಏಪ್ರಿಲ್ ಸಂಚಿಕೆಯ ಉತ್ತರಗಳು

**ಎಡದಿಂದ ಬಲಕ್ಕೆ :** ೧. ಮರಕುಟಿಗ, ೨. ನೆಲಮಂಗಲ, ೪. ವಂಶವಾಹಿನಿ, ೬. ರಕ್ಕಸ, ೯. ಹಾರಾಟ,  ೧೦. ಸುಳಿವು,೧೨. ಪಾರದರ್ಶಕ, ೧೪. ಗ್ರಹಿಕೆ, ೧೫. ವರಾಹ, ೧೬. ಮಜ್ಜನ.

**ಮೇಲಿಂದ ಕೆಳಕ್ಕೆ :** ೧. ಮದ್ದಾನೆ, ೩.ಲವಂಗ, ೫. ವಾನರ, ೭. ನಿಕಾಸ, ೮. ಮಂಡಲ ಹಾವು, ೧೧. ಟಪಾಲು, ೧೩. ದನಗಾಹಿ, ೧೪. ಗ್ರಹಣ, ೧೫. ವನ, ೧೭. ಡಿಂಡಿಮ.

- ಸುಬ್ಬು ಬಾದಲ್



# ಮಳೆಗಾಲದ ದಿನ

ಮಳೆ ಬಂದು ಕೆರೆ ತುಂಬಲು
ಹೊಲ ಗದ್ದೆಗಳು ಹಸಿರು
ಕಂಗೊಳಿಸುವುದು ಭೂತಾಯಿ ಒಡಲು

ನಿತ್ಯ ಹಕ್ಕಿಗಳ ಹಾರಾಟ
ಪ್ರಾಣಿ ಪಕ್ಷಿಗಳ ಚೀರಾಟ
ಚೆಲುವು ಸೂಸುವುದು ಆ ನೋಟ

ಬಂದಿರಲು ಹೊಲದಲ್ಲಿ ತೆನೆ
ನೋಡಲು ಚೆನ್ನ ಬಾಳೆಗೊನೆ
ಸಂತೋಷ ಇರುವುದು ಒಂದೇ ಸಮನೆ

ಮನೆಯ ತುಂಬ ನಗು
ತುಂಬಿಹುದು ಸುಮಂಗಲಿಯ ಸೊಬಗು
ಸಂತೋಷ ಒಳಗೂ-ಹೊರಗೂ

- ಶ್ರೀಕಾಂತ್ ಭಟ್



# ಪ್ರಕೃತಿ






# ಬಿಂಬ



